ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 3 ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಕೆ.ಎನ್ ವಕೀಲರಿಂದಃ

ನಾನು 1 ನೇ ಪ್ರತಿವಾದಿ ಸಂಸ್ಥೆಯಲ್ಲಿ 2005 ರಿಂದ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಪ್ರತಿವಾದಿ 2 ರವರ ಪರಿಚಯ ಇರುತ್ತದೆ. ವಿಶ್ವನಾಥ ಎನ್ನುವವರ ಪರಿಚಯ ಇರುವುದಿಲ್ಲ. ಈ ಹಿಂದೆ 1 ನೇ ಪ್ರತಿವಾದಿ ಪರ ಲಿಖಿತ ಹೇಳಿಕೆ ಮತ್ತು ದಾಖಲಾತಿಗಳನ್ನು ಸಲ್ಲಿಸಿರುವ ಸಮಯದಲ್ಲಿ 1 ನೇ ಪ್ರತಿವಾದಿ ಸಂಸ್ಥೆಯಲ್ಲಿ ನಡವಳಿಕೆ ನಡೆದು ರೆಸಲ್ಯೂಷನ್ ಪಾಸ್ ಮಾಡಿದ ನಂತರವೇ ಅಸಿಫ್ ಇಕ್ಬಾಲ್ ರವರು ಸಲ್ಲಿಸಿರುತ್ತಾರೆ. ಆ ಬಗ್ಗೆ ನಡೆದ ನಡವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿ ಸಂಸ್ಥೆಯ ಭಾಗವಾಗಿದೆ ಎಂದು ಹೇಳುವ ಏಷನ್ ಇನ್ಸಿಸ್ಟೂಟ್ ಡಿಸೈನ್ ಸಂಸ್ಥೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಿನಾಂಕ 01.04.1993 ರಂದು ಆದ ಜೆಪಿಎ ಮತ್ತು ಕರಾರು ಪತ್ರವನ್ನು ನಮಗೆ 2 ನೇ ಪ್ರತಿವಾದಿ ವಾಸುದೇವಮೂರ್ತಿರವರು ನೀಡಿರುತ್ತಾರೆ. ದಿನಾಂಕ 01.04.1993 ರಂದು ಆದ ಕರಾರು ಪತ್ರದಲ್ಲಿ ಸ್ವತ್ತಿನ ಸ್ವಾಧೀನದ ಬಗ್ಗೆ ತಿಳಿಸಲಾಗಿರುತ್ತದೆ. ಸದರಿ ಕರಾರು ಪತ್ರದ ಪ್ರಕಾರ 2 ನೇ ಪ್ರತಿವಾದಿಗೆ ಸ್ವಾಧೀನ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 01.04.1993 ರಂದು ಆದ ಜೆಪಿಎ ಮತ್ತು ಕರಾರು ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗಳು ಸೃಷ್ಟಿಸಿಕೊಂಡಂತಹ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯ 2 ನೇ ಪ್ರತಿವಾದಿರವರು 3 ನೇ ಪ್ರತಿವಾದಿ ಪ್ರತಿವಾದಿ, ವಾದಿ ಮತ್ತು ಇತರರ ವಿರುದ್ದ ಓಎಸ್ 123/1994 ರ ದಾವೆಯನ್ನು ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಿಡಿ-4 ರಲ್ಲಿ ತೋರಿಸಿರುವ 2 ನೇ ಪ್ರತಿವಾದಿ ವಿಳಾಸ ಸರಿ ಇರುತ್ತದೆ. ನಿಪಿ-21 ರಂತೆ 3 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಿನಾಂಕ 01.04.1993 ರಂದು ಮಾಡಿ ಕೊಟ್ಟ ಜಿಪಿಎ ಊರ್ಜಿತವಾಗಿರುವುದಿಲ್ಲ ಎಂದರೆ ನೋಟಿಸು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-4 ರಲ್ಲಿ ಮತ್ತು ನಿಪಿ-21 ರಲ್ಲಿ 2 ನೇ ಪ್ರತಿವಾದಿ ವಿಳಾಸ ಒಂದೇ ಇರುತ್ತದೆ ಎಂದರೆ ಸರಿ. ನಿಡಿ-4 ರಲ್ಲಿ ತೋರಿಸಿರುವ ಅರಸಯ್ಯ ಎನ್ನುವವರು ಸದರಿ ಪತ್ರ ಆಗುವ ಸಮಯದಲ್ಲಿ ಜೀವಂತ ಇರಲಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಕ್ರಯ ಪತ್ರದಲ್ಲಿ ಲಿಂಗಪ್ಪ ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ನಿಡಿ-4 ರಂತೆ ಕ್ರಯ ಪತ್ರವಾಗುವ ಸಮಯದಲ್ಲಿ ಕ್ರಯ ಪತ್ರದಲ್ಲಿ ತೋರಿಸಿರುವ ಮಾರಾಟಗಾರರು ಎಲ್ಲರೂ ಜೀವಂತ ಇದ್ದ ಕಾರಣ 2 ನೇ ಪ್ರತಿವಾದಿಗೆ ಆಗಿದ್ದ ಜಿಪಿಎ ನೋಂದಣಿಯಾಗಿಲ್ಲದೇ ಇರುವ ಕಾರಣ ನೇರವಾಗಿ ಮಾರಾಟಗಾರರ ಸಹಿಯನ್ನು ಕ್ರಯ ಪತ್ರದಲ್ಲಿ ತೆಗೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಗೆ ನಾವು ಅವರುಗಳ ಜಿಪಿಎ ಹೋಲ್ಡರ್ ಕಡೆಯಿಂದ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ 2 ನೇ ಪ್ರತಿವಾದಿ ಮಾಡಿಕೊಟ್ಟಿರುತ್ತಾರೆ ಎಂದು ಹೇಳುವ ಜಿಪಿಎ ನೋಂದಣಿಯಾಗಿಲ್ಲದೇ ಇರುವ ಕಾರಣ 2 ನೇ

ಪ್ರತಿವಾದಿಗೆ ಸ್ವತ್ತನ್ನು ನಮ್ಮ ಸಂಸ್ಥೆಗೆ ಮಾರಾಟ ಮಾಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಕಳೆದುಕೊಂಡ ಕೆಲವು ದಾಖಲೆಗಳ ಬಗ್ಗೆ ಹಲಸೂರು ಠಾಣೆಯಲ್ಲಿ ದೂರು ನೀಡಿರುತ್ತೇನೆ. ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ-7 ಮತ್ತು ನಿಡಿ-8 ರ ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 31.12.2005 ರಲ್ಲಿ ನಮ್ಮ ಸಂಸ್ಥೆರವರೇ 3 ನೇ ಪ್ರತಿವಾದಿ ಕೈಯಿಂದ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದು ನಿಪಿ-31 ರಂತೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-31 ರ ದೂರು ದಾಖಲಾದ ನಂತರ ನಿಡಿ-7 ಮತ್ತು ನಿಡಿ-8 ರ ದಾಖಲೆಗಳನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.